**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.120/2019**

**(ಚಾ.ಸಾ.2/ಪ್ರಾ.ಸಾ.2)**

ತಾಃ26-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಕಮಲಾಕ್ಷಿ |
| ತಂದೆಯ ಹೆಸರು | ನಾಗರಾಜು |
| ವಯಸ್ಸು | 42 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ ಸ್ಥಳ | ದಳಸಗೆರೆ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ.1 ರವರು ನನ್ನ ಬಾವನಾದ ಚಾಸಾ.5 ರವರ ಮಗನಾಗಿರುತ್ತಾರೆ. ಚಾಸಾ.3 ನನ್ನ ಯಜಮಾನರಾಗಿದ್ದು, ಚಾಸಾ.4 ಕೃಷ್ಣಪ್ಪ ನನ್ನ ಮಾವನಾಗಿದ್ದು ಅವರು 1 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ನನಗೆ ಎಲ್ಲಾ ಆರೋಪಿತರ ಪರಿಚಯ ಇದ್ದು ಅವರೆಲ್ಲರೂ ನಮ್ಮ ಸಂಬಂಧಿಕರಾಗಿದ್ದು 3 ಮತ್ತು 4 ನೇ ಆರೋಪಿತರು ಮೃತಪಟ್ಟಿರುತ್ತಾರೆ. ನಮಗೆ ದಳಸಗೆರೆ ಗ್ರಾಮದಲ್ಲಿ ಸರ್ವೆ ನಂ.171 ರಲ್ಲಿ 13 ಕಾಲು ಗುಂಟೆ ಜಮೀನು ಇರುತ್ತದೆ. ಸದರಿ ಸ್ವತ್ತು ಚಾಸಾ.4 ಕೃಷ್ಣಪ್ಪ ಇವರ ಹೆಸರಿನಲ್ಲಿದ್ದು, ಸದರಿ ಸ್ವತ್ತಿನಲ್ಲಿ ನಾವು ಹಾಗೂ ಆರೋಪಿತರು ಮನೆಗಳನ್ನು ಕಟ್ಟಿರುತ್ತೇವೆ. ದಿನಾಂಕ 13-10-2018 ರಂದು ಬೆಳಗ್ಗೆ 11ಃ00 ಗಂಟೆ ಸಮಯದಲ್ಲಿ ಎಲ್ಲಾ ಆರೋಪಿತರು ನಮ್ಮ ಜಮೀನಿಗೆ ಚಪ್ಪಡಿ ಕಲ್ಲನ್ನು ಹಾಕಲು ಬಂದಿದ್ದರು. ಅಗ ಚಾಸಾ.4 ಕೃಷ್ಣಪ್ಪ ಇವರು ಚಪ್ಪಡಿ ಕಲ್ಲನ್ನು ಹಾಕುವುದು ಬೇಡ ಕುಳಿತು ಮಾತನಾಡೋಣ ಎಂದು ಹೇಳಿ ಹೆಚ್ ಕ್ರಾಸ್ ಗೆ

ಹೋಗಿರುತ್ತಾರೆ. ಸದರಿ ಜಮೀನಿನಲ್ಲಿ ಮನೆ ಕಟ್ಟಿರುವ ವಿಸ್ತೀರ್ಣ ಬಿಟ್ಟು ಉಳಿದ ಜಾಗ ಖಾಲಿ ಇರುತ್ತದೆ. ಪುನಃ ಅದೇ ದಿನ ಸಂಜೆ 04:00 ಗಂಟೆಗೆ ಆರೋಪಿತರು ತಮ್ಮ ಬಳಿ ಕಬ್ಬಿಣದ ರಾಡ್ ಹಾಗೂ ಕಟ್ಟಿಗೆ ಹಿಡಿದುಕೊಂಡು ಬಂದು ಜಮೀನಿನಲ್ಲಿ ಚಪ್ಪಡಿ ಕಲ್ಲನ್ನು ಹೂಳುತ್ತಿದ್ದರು. ಆಗ ನಾನು ಮತ್ತು ಚಾಸಾ.3 ರವರು ಸ್ಥಳಕ್ಕೆ ಹೋಗಿದ್ದು ನಂತರ ಚಾಸಾ.1 ರವರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರಿಗೆ ಚಪ್ಪಡಿ ಕಲ್ಲನ್ನು ಹೂಳುವುದು ಬೇಡ, ಚಾಸಾ.4 ರವರು ಬಂದ ನಂತರ ಮಾತನಾಡೋಣ ಎಂದು ನಾವೆಲ್ಲರು ತಿಳಿಸಿರುತ್ತೇವೆ. ನಂತರ 1 ರಿಂದ 3 ನೇ ಆರೋಪಿತರು ಸೂಳೆ ಮಕ್ಕಳ ಲೋಫರ್ ನನ್ನ ಮಕ್ಕಳ ಎಂದು ಬೈದು ಯಾರಾದರು ಬಂದಲ್ಲಿ ಮುಗಿಸುವುದಾಗಿ ಬೆದರಿಕೆ ಹಾಕಿರುತ್ತಾರೆ.

2. ನಂತರ ಚಾಸಾ.1 ರವರಿಗೆ 1 ನೇ ಆರೋಪಿ ಮಂಜುನಾಥ್ ಅವರು ಕಬ್ಬಿಣದ ರಾಡ್ ನಿಂದ ಚಾಸಾ.1 ರವರ ತಲೆಗೆ ಹೊಡೆದಿರುತ್ತಾರೆ. ನಾನು ಅಡ್ಡ ಹೋದಾಗ 3 ನೇ ಆರೋಪಿ ರಾಜಣ್ಣ ನನ್ನ ಬಟ್ಟೆ ಹಿಡಿದು ಎಳೆದಾಡಿ ಬಲ ಕೈ ತಿರುಚಿ ಹಲ್ಲೆ ಮಾಡಿರುತ್ತಾರೆ. ನಂತರ 2 ನೇ ಆರೋಪಿ ತನ್ನ ಕೈ ಕಾಲುಗಳಿಂದ ಚಾಸಾ.3 ರವರಿಗೆ ಹೊಡೆದು ಗಾಯಗೊಳಿಸಿರುತ್ತಾರೆ. ಉಳಿದ ಆರೋಪಿತರು ಸಹ ನನಗೆ, ಚಾಸಾ.1 ಮತ್ತು 3 ರವರಿಗೆ ಕೈ ಕಾಲುಗಳಿಂದ ಹೊಡೆದಿರುತ್ತಾರೆ. ನಂತರ ಚಾಸಾ.5 ರವರು ಸ್ಥಳಕ್ಕೆ ಬಂದು ಗಲಾಟೆಯನ್ನು ಬಿಡಿಸಿ ಚಾಸಾ.1 ರವರನ್ನು ಬೈಕ್ ನಲ್ಲಿ ನಂದಗುಡಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಹಾಗೂ ಚಾಸಾ.3 ರವರು ಮತ್ತೊಂದು ಬೈಕ್ ನಲ್ಲಿ ಹೋಗಿ ನಂದಗುಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ. ಆರೋಪಿತರು ಹಲ್ಲೆಗೆ ಉಪಯೋಗಿಸಿದ ರಾಡ್ ಹಾಗೂ ದೊಣ್ಣೆಯನ್ನು ಸಾಕ್ಷಿದಾರರು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿದಾರರು ಗಲಾಟೆಯಲ್ಲಿ ತನಗೆ, ಚಾಸಾ.1 ರವರಿಗೆ ಏಟು ಬಿದ್ದ ಬಗ್ಗೆ ತೆಗೆದ ನಿಪಿ.3 ರಿಂದ 6 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ಘಟನೆಯ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ಗಲಾಟೆ ಸಮಯದಲ್ಲಿ 2 ನೇ ಆರೋಪಿ 3 ನೇ ಆರೋಪಿಯಿಂದ ದೊಣ್ಣೆ ಕಿತ್ತುಕೊಂಡು ಚಾಸಾ.3 ರವರಿಗೆ ಹಲ್ಲೆ ಮಾಡಲು ಬಂದಾಗ ಅವರು ತಪ್ಪಿಸಿಕೊಂಡಿದ್ದು, ಆದರೂ ಸಹ 2 ನೇ ಆರೋಪಿ ದೊಣ್ಣೆ ಇಂದ ಚಾಸಾ.3 ರವರ ಕೈ ಗೆ ಒಂದು ಏಟು ಹೊಡೆದಿದ್ದು ಅದರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ.ಎಮ್.ಎಸ್.ಆರೋಪಿಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಮಾಧ್ಯಾಹ್ನ ಕೂಗಿಸಲು ಕೋರಿದ್ದು, ಕೇಸನ್ನು ಮಧ್ಯಾಹ್ನ ಕೂಗಿಸುವುದು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಎಸ್.ಸಿ.ನಂ.120/2019
ಚಾ.ಸಾ.2/ಪ್ರಾ.ಸಾ.2

**<u>ಪುನಃ ಪ್ರಕರಣವನ್ನು ಮಧ್ಯಾಹ್ನ 04ಃ00 ಗಂಟೆಗೆ ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಮಾಡಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ.ಎಮ್.ಎಸ್.ಆರೋಪಿಪರ ವಕೀಲರಿಂದಃ</u>**

ಶ್ರೀ.ಎಮ್.ಎಸ್.ವಕೀಲರು 3 ಮತ್ತು 4 ನೇ ಆರೋಪಿತರು ಮೃತ ಪಟ್ಟಿರುವ ಕಾರಣ ಪ್ರಕರಣದ ಬಗ್ಗೆ ಮಾಹಿತಿ ಪಡೆದಿಲ್ಲ ಈ ಕಾರಣಕ್ಕಾಗಿ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.